# ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಸಾಮಾಜಿಕ ಸಮಾನತೆ

ಎಂ.ಎನ್. ಚಲವಾದಿ
ಸಹಾಯಕ ಉಪನ್ಯಾಸಕರು, ಯೋಗ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

DOI: https://doi.org/10.5281/zenodo.17806009

## ABSTRACT:

ಪ್ರಸ್ತುತ ಲೇಖನವು ಡಾ. ಬಿ.ಆರ್. ಅಂಬೇಡ್ಕರ್ ಅವರ ಸಾಮಾಜಿಕ ಸಮಾನತೆ ಮತ್ತು ನ್ಯಾಯದ ಸಿದ್ಧಾಂತಗಳ ಮಹತ್ವವನ್ನು ವಿಶ್ಲೇಷಿಸುತ್ತದೆ. ಅಸಮಾನತೆ, ಶೋಷಣೆ ಮತ್ತು ಜಾತಿ ವ್ಯವಸ್ಥೆಯ ವಿರುದ್ಧ ಅಂಬೇಡ್ಕರ್‌ರವರು ಮಾಡಿದ ಹೋರಾಟ, ಅವರ ವಿಚಾರಗಳು ಮತ್ತು ಸಂವಿಧಾನದ ಮೂಲಕ ಅವರು ತಂದ ಬದಲಾವಣೆಗಳ ಮೇಲೆ ಬೆಳಕು ಚೆಲ್ಲುತ್ತದೆ. ಶಿಕ್ಷಣದಿಂದ ಮಾತ್ರ ಸಾಮಾಜಿಕ ನ್ಯಾಯ ಸಾಧ್ಯ ಎಂದು ಪ್ರತಿಪಾದಿಸಿದ ಅಂಬೇಡ್ಕರ್, ದಲಿತರು ಮತ್ತು ಮಹಿಳೆಯರ ಉನ್ನತಿಗಾಗಿ ಶ್ರಮಿಸಿದರು. ಸಮಾನತೆ, ಭ್ರಾತೃತ್ವ, ಮತ್ತು ಮಾನವ ಹಕ್ಕುಗಳನ್ನು ಪ್ರತಿಪಾದಿಸುವ ಅವರ ದೃಷ್ಟಿಕೋನವು ಇಂದಿಗೂ ಪ್ರಸ್ತುತವಾಗಿದೆ. ಭಾರತೀಯ ಸಂವಿಧಾನದ ಮೂಲಕ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ತರುವ ಅವರ ಪ್ರಯತ್ನವು ದೇಶದಲ್ಲಿ ಶಾಂತಿ ಮತ್ತು ಸಮಗ್ರ ಅಭಿವೃದ್ಧಿಗೆ ಕಾರಣವಾಗಿದೆ.

## KEYWORDS:

ಸಾಮಾಜಿಕ ಸಮಾನತೆ, ಡಾ. ಬಿ.ಆರ್. ಅಂಬೇಡ್ಕರ್, ಸಾಮಾಜಿಕ ನ್ಯಾಯ, ಶಿಕ್ಷಣ, ಸಂವಿಧಾನ.

ಅಸಮಾನತೆ ಮತ್ತು ಶೋಷಣೆಗಳನ್ನು ಅನಿರ್ಬಂಧಿತ ಹಕ್ಕನ್ನಾಗಿಸಿಕೊಂಡು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯ ವಿರುದ್ಧದ ಆಲೋಚನೆಗಳು ಸಿದ್ಧಾಂತಗಳಾಗಿ ರೂಪಗೊಂಡು ಸಂಘಟನಾತ್ಮಕ ಶಕ್ತಿಯನ್ನು ಪಡೆದುಕೊಂಡು ಹೋರಾಟ ಮತ್ತು ಚಳುವಳಿಗಳ ಮೂಲಕ ಜನಸಾಮಾನ್ಯರ ಬದುಕನ್ನು ಸುಧಾರಿಸಲು ಪ್ರಯತ್ನಿಸಿ ಹೊಸ ಸಂಸ್ಕೃತಿಯ ಹುಟ್ಟಿಗೆ ಕಾರಣವಾಗಿರುವುದನ್ನು ಇತಿಹಾಸದಲ್ಲಿ ಕಾಣುತ್ತೇವೆ. ಇಂತಹ ಜನಪರ ಸಿದ್ಧಾಂತಗಳಲ್ಲಿ ಬುದ್ಧ, ಬಸವ, ಮತ್ತು ಡಾ. ಬಿ. ಆರ್. ಅಂಬೇಡ್ಕರ್ ಅವರ ಸಮಾಜ ಮುಖಿಯಾಗಿರುವ ಸಿದ್ಧಾಂತಗಳು ಮಹತ್ವದ್ದಾಗಿವೆ. ಅವರು ತಮ್ಮ ಜೀವನದುದ್ದಕ್ಕೂ ಜನಪರ ಕಾಳಜಿಯಿಂದ ಹೋರಾಡಿದರು. ಅಸಮಾನತೆ ಮತ್ತು ಶೋಷಣೆ ಮುಕ್ತ ಸಮಾಜಕ್ಕಾಗಿ ಶ್ರಮಿಸಿದರು. ಅವರ ವಿಚಾರ ಚಿಂತನೆ ಸಿದ್ಧಾಂತಗಳು ಇವತ್ತಿನ ಸಂದರ್ಭಕ್ಕೂ ಪ್ರಸ್ತುತವೆನಿಸುತ್ತವೆ.

ಡಾ. ಬಿ. ಆರ್. ಅಂಬೇಡ್ಕರ್ ಅವರು ಸಾಮಾಜಿಕ ಸಮಾನತೆಗಾಗಿ ಹೋರಾಡಿದ ಮಹಾನ್ ಭಾರತೀಯ ನಾಯಕರಲ್ಲೊಬ್ಬರು. ಬಾಬಾಸಾಹೇಬ ಅಂಬೇಡ್ಕರ್‌ರವರ ಹೆಸರು ಬಂದ ತಕ್ಷಣ ಮೊದಲು ನೆನಪಿಗೆ ಬರುವುದು ಅವರ ಸಾಮಾಜಿಕ ನ್ಯಾಯದ ಸಿದ್ಧಾಂತ. ಸಂವಿಧಾನ ಕರ್ತೃವಾಗಿ, ದಲಿತರ ಹಕ್ಕುಗಳ ವಿಮೋಚನಾ ಹೋರಾಟಗಾರರಾಗಿ ಅವರು ದೊಡ್ಡ ಹೆಸರು ಸಂಪಾದಿಸಿದ್ದು ಸಾಮಾಜಿಕ ನ್ಯಾಯದ ಸಿದ್ಧಾಂತದಿಂದ. ಅದು ಇಂದು ಭಾರತಕ್ಕೆ ಮಾತ್ರ ಅಲ್ಲದೇ ಹಲವಾರು ಹಿಂದುಳಿದ ದೇಶಗಳಿಗೆ ಮತ್ತು ಮೇಲು, ಕೀಳು ಎಂಬ ಭಾವನೆಯನ್ನು ಹೊಂದಿರುವಂತಹ ದೇಶಕ್ಕೆ ಬಹಳ ದೊಡ್ಡ ಸಾಮಾಜಿಕ ಸಿದ್ಧಾಂತವಾಗಿ

ಕೆಲಸ ಮಾಡುತ್ತಿದೆ. ಸಂವಿಧಾನದ ಮುಖಾಂತರ ಅವರು ಯಾವ ಸಾಮಾಜಿಕ ನ್ಯಾಯದ ಸಿದ್ಧಾಂತವನ್ನು, ಮೀಸಲಾತಿಯ ಸಿದ್ಧಾಂತವನ್ನು, ಸಮಾನತೆಯ ಸಿದ್ಧಾಂತವನ್ನು ಅವರು ಮಂಡಿಸಿದ್ದರೋ ಅದು ವಾಸ್ತವವಾಗಿ ಸ್ವಾತಂತ್ರ್ಯದ ನಂತರ ಭಾರತದಲ್ಲಿ ದಲಿತ ಜನ ಸಮುದಾಯದ ಜೀವನ ಭದ್ರತೆ ವಿಸ್ತರಿಸುವುಕ್ಕಾಗಿತ್ತು. ಮತ್ತು ಪುನರ್ ಗಳಿಸಿ ಕೊಡುವುದಾಗಿತ್ತು. ಶಿಕ್ಷಣದಿಂದ ಮಾತ್ರ ಸಾಮಾಜಿಕ ನ್ಯಾಯ ಸಾಧ್ಯ ಎನ್ನುವುದನ್ನು ಮನಗಂಡ ಅಂಬೇಡ್ಕರ್‌ರವರು ಶಿಕ್ಷಣಕ್ಕೆ ಮೊದಲ ಆದ್ಯತೆಯನ್ನು ಕೊಟ್ಟರು. ದಲಿತ ಸಮುದಾಯಗಳು ಯುಗ ಯುಗಗಳಿಂದ ಅನುಭವಿಸುತ್ತಿರುವ ಅಸ್ಪ್ರಶ್ಯತೆ ನೋವು ಮತ್ತು ನಿರಂತರ ಶೋಷಣೆಗಳಿಂದ ಬಿಡುಗಡೆ ಹೊಂದುವ ಏಕೈಕ ಮಾರ್ಗವೆಂದರೆ ಶಿಕ್ಷಣ ಮಾತ್ರ. ಅಂಬೇಡ್ಕರ್‌ರವರು ಶಿಕ್ಷಣವನ್ನು ಹೇಗೆ ಪಡೆದುಕೊಳ್ಳಬೇಕು, ವಿದ್ವತ್ತನ್ನು ವ್ಯಕ್ತಿಯ ಸಂಪತ್ತನ್ನಾಗಿ ಹೇಗೆ ಗಳಿಸಬೇಕು, ಎಂಬುದಕ್ಕೆ ಎಲ್ಲ ಸಮುದಾಯಗಳಿಗೆ ಅಂಬೇಡ್ಕರ್‌ರವರು ಒಂದು ಉತ್ತಮ ಮಾದರಿಯಾದರು.

ಭಾರತದಲ್ಲಿ ಜಾತಿ ವ್ಯವಸ್ಥೆ ಎನ್ನುವುದು ಬುದ್ಧನ ಕಾಲದ ನಂತರವೂ ಅಂದರೆ ಸುಮಾರು 2500 ವರ್ಷಗಳ ತರವಾತಲೂ ಈ ಸಮಸ್ಯೆ ಹಾಗೆಯೇ ಉಳಿದಿದೆ ಎಂಬುದು ಭಾರತದ ಪ್ರಸ್ತುತ ಜಾತಿ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಭಾರತದಲ್ಲಿ ಇದುವರೆಗೂ ಅಸ್ಪ್ರಶ್ಯತೆ ಮತ್ತು ಜಾತೀಯತೆಯನ್ನು ನಿರ್ಮೂಲನೆ ಮಾಡಲು ಸಾಧ್ಯವಾಗಿಲ್ಲ. ಭಾರತೀಯ ಸಮಾಜವು ಜಾತಿ ರಹಿತ ಅಥವಾ ಜಾತಿ ತಟಸ್ಥ ಸಮಾಜವಾಗುತ್ತಾ ಸಾಗುತ್ತಿಲ್ಲ. ಇದಕ್ಕೆ ಸಾಮಾಜಿಕ ಮತ್ತು ರಾಜಕೀಯ ಪ್ರಜಾಪ್ರಭುತ್ವದ ಸಾಧನವಾಗಿ ಮಾನವ ಹಕ್ಕುಗಳ ಸಮಾನತೆ ಮತ್ತು ಸ್ವಾತಂತ್ರ್ಯವು ಮುಖ್ಯ ಪರಿಹಾರವಾಗಿದೆ ಎಂದು ಅಂಬೇಡ್ಕರ್‌ರವರು ಒತ್ತಿ ಹೇಳಿದರು. ಸಮಾಜದಲ್ಲಿ ಬಹುತೇಕ ಜನರು ಮಾನವ ಹಕ್ಕುಗಳಿಂದ ವಂಚಿತರಾಗಿರುವುದನ್ನು ಅರಿತುಕೊಂಡ ಅವರು ಜಾತಿ ಮತ್ತು ಅನ್ಯಾಯದ ವಿರುದ್ಧ ಹೋರಾಟ ನಡೆಸಿದರು. ಈ ಮೂಲಕ ಅವರು ಭಾರತದಲ್ಲಿ ಸಮಾನ ಮಾನವ ಹಕ್ಕುಗಳಿಗಾಗಿ ಹೋರಾಟಕ್ಕಿಳಿದರು. ಅಸ್ಪ್ರಶ್ಯರ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಅಸಾಮರ್ಥ್ಯಗಳನ್ನು ತೊಡೆದು ಹಾಕಲು ಸಂಘಟನೆಯನ್ನು ಸ್ಥಾಪಿಸುವುದು ಅಗತ್ಯವಾಗಿತ್ತು. ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಎಲ್ಲಾ ಪುರುಷರು ಮತ್ತು ಮಹಿಳೆಯರಿಗೆ ಸಮಾನವಾಗಿ ಒದಗಿಸಿಕೊಡುವುದು ಪ್ರಜಾಪ್ರಭುತ್ವ ಸರಕಾರದಿಂದ ಮಾತ್ರ ಸಾಧ್ಯ ಎಂದು ಅವರು ಅರಿತುಕೊಂಡರು. ಹೀಗಾಗಿ ನೈಜ ಸಾಮಾಜಿಕ, ಪ್ರಜಾಪ್ರಭುತ್ವವನ್ನು ರಚಿಸುವುದು ಅವರ ಜೀವನದ ಅಂತಿಮ ಮಹತ್ವಾಕಾಂಕ್ಷೆಯಾಗಿತ್ತು. ಅವರು ತಮ್ಮ ಇಡೀ ಜೀವನವನ್ನು ಸಮಾಜದ ಉನ್ನತಿಗಾಗಿ ಮುಡಿಪಾಗಿಟ್ಟರು. ಮೇಲ್ವರ್ಗ ಮತ್ತು ಕೆಳವರ್ಗದ ಅಸ್ಪ್ರಶ್ಯರ ನಡುವಿನ ಅಂತರವನ್ನು ದೂರ ಮಾಡಲು ನಿರಂತರವಾಗಿ ಹೋರಾಡಿದರು. ಅಂಬೇಡ್ಕರ್‌ರವರ ಈ ಆಲೋಚನೆಗಳು ಆಧುನಿಕ ಸಮಾಜಕ್ಕೆ ವಾಸ್ತವಿಕತೆಯನ್ನು ಪ್ರಸ್ತುತಪಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಡಾ. ಬಿ.ಆರ್.ಅಂಬೇಡ್ಕರ್‌ರವರ ಸಾಮಾಜಿಕ ನ್ಯಾಯದ ದೃಷ್ಟಿಕೋನವು ಏಕತೆ, ಸಮಾನತೆ, ಪುರುಷ ಮತ್ತು ಮಹಿಳೆಗೆ ಸಮಾನ ಮೌಲ್ಯ, ಸಹಿಷ್ಣುತೆ, ಶಿಕ್ಷಣ, ಆಸ್ತಿಯನ್ನು ಸಮಾನವಾಗಿ ವಿತರಿಸಬೇಕು ಎಂದು ಭ್ರಾತೃತ್ವ ಮತ್ತು ಭಾವನಾತ್ಮಕ ಏಕೀಕರಣಕ್ಕೆ ಅವರು ಒತ್ತು ನೀಡಿದರು. ಅವರ ಪ್ರಕಾರ ಕಾನೂನು ನೈತಿಕತೆ ಮತ್ತು ಸಾರ್ವಜನಿಕ ಆತ್ಮ ಸಾಕ್ಷಿಯ ಮೂಲಕ, ಅಸಮಾನತೆಗಳನ್ನು ತೊಡೆದು ಹಾಕುವ ಮೂಲಕ ಮಾತ್ರ ಸಾಮಾಜಿಕ ನ್ಯಾಯವನ್ನು ಸಾಧಿಸಬಹುದು. ಅಂಬೇಡ್ಕರ್ ಅವರು ಸಮಾಜದ ಎಲ್ಲಾ ಮಹಿಳೆಯರಿಗೆ ಧರ್ಮ, ಜಾತಿ, ವರ್ಗವನ್ನು ಹೊರತುಪಡಿಸಿ ಅವರ ಸರ್ವಾಂಗೀಣ ಅಭಿವೃದ್ಧಿಯ ಬಗ್ಗೆ

ಕಾಳಜಿಗಳನ್ನು ವ್ಯಕ್ತಪಡಿಸಿದ್ದಾರೆ. ಮಹಿಳಾ ವರ್ಗಕ್ಕೆ, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣವನ್ನು ನೀಡಬೇಕು. ಅದರಿಂದ ಮಹಿಳೆಯರು ತಮ್ಮನ್ನು ರಕ್ಷಿಸಿಕೊಳ್ಳಲು ಆತ್ಮ ರಕ್ಷಣಾ ತಂತ್ರಗಳ ತರಬೇತಿಯನ್ನು ನೀಡಬೇಕು. ಆಗ ಮಾತ್ರ ಮಹಿಳೆ ಎಂಬುದಕ್ಕೆ ಹೊಸ ವ್ಯಾಖ್ಯಾನ ಅಸ್ತಿತ್ವಕ್ಕೆ ಬರಲು ಸಾಧ್ಯ ಎಂದು ಅವರು ಪ್ರತಿಪಾದಿಸಿದರು.

ಡಾ. ಬಿ.ಆರ್.ಅಂಬೇಡ್ಕರ್ ಅವರು ಹಲವಾರು ದೇಶಗಳ ಸಂವಿಧಾನವನ್ನು ಆಳವಾಗಿ ಅಧ್ಯಯನ ಮಾಡಿ ಸ್ವಾತಂತ್ರ್ಯದ ನಂತರ ಭಾರತ ಸಂವಿಧಾನವನ್ನ ರಚಿಸಿ 1950 ಜನವರಿ 26 ರಂದು ಜಾರಿಗೆ ತಂದರು. ಅಂದಿನಿಂದ ಲಿಂಗ, ಜಾತಿ, ಮತ, ಪಂಗಡ ಮುಂತಾದವುಗಳಲ್ಲಿ ತಾರತಮ್ಯವನ್ನು ಕಡೆಗಣಿಸಿ ಸಮಾನತೆಯನ್ನು ತರಲಾಯಿತು. ಸಮಾಜ, ಸಮುದಾಯ, ಸಂಸ್ಥೆ ಹಾಗೂ ಸಮೂಹಗಳಲ್ಲಿ ರೂಢಿ, ಸಂಪ್ರದಾಯ, ನಿಯಮಗಳು, ಮೌಲ್ಯ, ಇತ್ಯಾದಿ ಸಾಂಸ್ಕೃತಿಕ ಅಂಶಗಳು ಹೊಸ ಪೀಳಿಗೆಗೆ ಅನುಗುಣವಾಗಿ ಹೊಸತನವನ್ನು ಪಡೆಯುತ್ತಲೇ ಇರುವುದರಿಂದ ಜನರ ಜೀವನ ವಿಧಾನದಲ್ಲಿ ಬದಲಾವಣೆಯನ್ನು ಕಾಣಬಹುದು. ಪ್ರಸ್ತುತ ಸಾಮಾಜಿಕ ವ್ಯವಸ್ಥೆಯಲ್ಲಿ ಹಲವಾರು ಬದಲಾವಣೆಗಳು ಕಂಡುಬರುತ್ತವೆ. ಇದಕ್ಕೆ ಕಾರಣ ಸಂವಿಧಾನದ ಹಲವಾರು ವಿಚಾರಗಳು ಎನ್ನುವುದು ಮಹತ್ವದ ಸಂಗತಿಯಾಗಿದೆ. ಯಾವುದೇ ಭೇದವಿಲ್ಲದೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ, ಹಾಗೂ ರಾಜಕೀಯವಾಗಿ ನ್ಯಾಯವನ್ನು ಎತ್ತಿ ಹಿಡಿಯುವ ಭರವಸೆ ನೀಡಿದೆ. ಹಾಗೂ ರಾಷ್ಟ್ರದ ನಾಗರಿಕರ ಸರ್ವತೋಮುಖ ಅಭಿವೃದ್ಧಿ ಸಾಧಿಸಲು ನೆರವಾಗುತ್ತಿದೆ. ಅಷ್ಟೇ ಅಲ್ಲದೆ ಸಾಮಾಜಿಕ ಸಮಸ್ಯೆಗಳಾದ ಜಾತೀಯತೆ, ಕೋಮುವಾದ, ಅಸಮಾನತೆ, ಭ್ರಷ್ಟಾಚಾರ, ಕೆಲವು ದುರ್ಬಲ ವರ್ಗಗಳ ಮೇಲಿನ ದೌರ್ಜನ್ಯ ಕಡಿಮೆಯಾಗಿ ಸಮಾಜದಲ್ಲಿ ಶಾಂತಿ ನೆಲೆಸುತ್ತಿದೆ.

ಅಸ್ಪ್ರಶ್ಯತೆ, ಶೋಷಣೆ, ಅಸಮಾನತೆಗಳ ಸಮಾಜದಿಂದ ನೋವುಂಡು ಮೇಲೆ ಬಂದ ಪ್ರತಿಭಾನ್ವಿತ ಜ್ಞಾನಿ, ದೇಶೀಯ ಅಸಮಾನತೆ, ವಿದೇಶದಲ್ಲಿನ ಸ್ವತಂತ್ರ ಜೀವನ, ಶಿಕ್ಷಣ ಹಕ್ಕುಗಳು, ಹಲವು ಘಟನೆ ಮತ್ತು ಮಹನೀಯರ ಪ್ರಭಾವವು ಬಾಬಾಸಾಹೇಬರ ಮೇಲೆ ಅಗಾಧವಾಗಿ ಪ್ರಭಾವ ಬೀರಿತ್ತು. ಈ ಎಲ್ಲ ಕಾರಣದಿಂದಾಗಿ ಅಂಬೇಡ್ಕರ್‌ರವರು ದಲಿತ ವರ್ಗದವರ ಹಕ್ಕುಗಳಿಗೆ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡರು. ಭಾರತದಲ್ಲಿ ಜನಿಸಿದ ಪ್ರತಿ ನಾಗರೀಕರೂ ಸಮಾನ ರೀತಿಯ ಹಕ್ಕುಗಳನ್ನು ಹೊಂದಿರಬೇಕು ಎಂದು, ಶೋಷಿತರಾದ ಜನವೆಂದು, ಅವರನ್ನು ಸಮಾನ ಹಂತಕ್ಕೆ ತರಲು ಅಹರ್ನಿಶಿ ದುಡಿದರು.

ವರ್ಗ, ವರ್ಣ, ಜಾತಿ, ಲಿಂಗ ಮುಂತಾದ ವ್ಯವಸ್ಥೆಗಳು ದೇಶದಿಂದ ದೇಶಕ್ಕೆ ತಮ್ಮದೇ ಆದ ಅಸ್ತಿತ್ವವನ್ನು ಪಡೆದುಕೊಂಡಿದೆ. ಆದರೆ ಭಾರತದ ಸಮಾಜ ವ್ಯವಸ್ಥೆಯಲ್ಲಿ ಜಗತ್ತಿನ ಇತರೆ ದೇಶಗಳಿಗಿಂತ ವಿಭಿನ್ನ ಮತ್ತು ಅತೀ ವಿಚಿತ್ರ ಹಾಗೂ ಅತೀ ಕ್ರೂರ ಪದ್ಧತಿಯು ರೂಢಿಗತವಾಗಿ ಬಂದಿದೆ. ನಮ್ಮ ಭಾರತೀಯ ಸಂಸ್ಕೃತಿ ಮಾನವೀಯತೆಗೂ ನಾಚಿಕೆಯಾಗುವಂತಹ ಅಮಾನುಷ ಪದ್ಧತಿಗಳನ್ನು ಈ ಸಮಾಜದಲ್ಲಿ ಹುಟ್ಟಿ ಹಾಕಿದ್ದಲ್ಲದೇ, ಇಂದಿನವರೆಗೂ ಅವುಗಳನ್ನು ಬಹು ಎಚ್ಚರಿಕೆಯಿಂದಲೇ ನಡೆಸಿ, ಉಳಿಸಿಕೊಂಡು ಬಂದಿವೆ. ಜಾತಿ ರಹಿತ ಸಮಾಜ ಮತ್ತು ಸಾಮಾಜಿಕ ಸಮಾನತೆ ನಿರ್ಮಾಣವಾಗಬೇಕಾದರೆ ವ್ಯಕ್ತಿಗಳಿಗೆ ಸಾಮಾಜಿಕ ಸಮಾನತೆ ಸಿಗಬೇಕು. ಸಮಾನ ಮತ್ತು ಸ್ವತಂತ್ರ ಬದುಕು ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕೆ ಅತೀ ಅಗತ್ಯವಾದದ್ದು. ಶಿಕ್ಷಣ ಮತ್ತು ಸಂಘಟನೆಯ ಮೂಲಕ ಸಾಮಾಜಿಕ ಸಮಾನತೆಯನ್ನು ಸಾಧಿಸಬಹುದು. ಈ ಸಾಮಾಜಿಕ ಅನ್ಯಾಯ ತೊಡೆದು ಹಾಕಿ ಸಾಮಾಜಿಕ ನ್ಯಾಯ ಸೃಷ್ಟಿಸುವಲ್ಲಿ ಬಾಬಾಸಾಹೇಬ ಅಂಬೇಡ್ಕರ್‌ರವರ ಪಾತ್ರ ಬಹುಮುಖ್ಯವಾದುದು.

## ಆಧಾರ ಗ್ರಂಥಗಳು


1. ಡಾ. ಮ. ನ. ಜವರಯ್ಯ – ಅಂಬೇಡ್ಕರ್ ಶೂದ್ರ ಮತ್ತು ಮಹಿಳೆಯರು (2008)–ಸಿದ್ದಾರ್ಥ ಗ್ರಂಥ ಮಾಲೆ ಮೈಸೂರು.
2. ಡಾ. ಬಾಬಾಸಾಹೇಬ ಅಂಬೇಡ್ಕರ್‌ರವರ ಸಮಗ್ರ ಬರಹಗಳು ಮತ್ತು ಭಾಷಣಗಳು–2 (2015) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು.
3. ಭಾರತದ ಸಂವಿಧಾನ ಪಿ. ಗಂಗಾಧರ – 2016
4. ಕರ್ನಾಟಕದ ಸಮಗ್ರ ದಲಿತ ಚರಿತ್ರೆ – ಡಾ. ಚೆನ್ನಸ್ವಾಮಿ ಸೋಸಲೆ
5. ಚ. ನ. ಶಂಕರರಾವ್ – ಮಹಿಳಾ ಅಧ್ಯಯನ –2016– ಜೈ ಭಾರತ ಪ್ರಕಾಶನ
6. ಪ್ರೋ. ಎಚ್. ಲಿಂಗಪ್ಪ – ಡಾ. ಬಿ. ಆರ್. ಅಂಬೇಡ್ಕರ್‌ರವರ ಸಾಮಾಜಿಕ–ಆರ್ಥಿಕ–ರಾಜಕೀಯ ನೆಲೆಗಳು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.